**ಪ್ರಧಾನ ಸಿವಿಲ್ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ ಚಿಂಚೋಳಿ**

**ಸಿ.ಸಿ. ನಂ. 464/2025**

| | | | |
|---|---|---|---|
| **ಹೆಸರು** | : | **ಕಲ್ಲಯ್ಯ** | **ಚಾಸಾ. 4** |
| **ತಂದೆಯ ಹೆಸರು** | : | **ಗುರುಪಾದಯ್ಯ** | **ಪ್ರಾ.ಸಾ. 1** |
| **ವಯಸ್ಸು** | : | **60 ವರ್ಷ** | **ದಿನಾಂಕಃ 16-07-2026** |
| **ಉದ್ಯೋಗ** | : | **ಪೇದೆ** | |
| **ವಾಸಸ್ಥಳ** | : | **ಬಿಜಾಪುರ** | |

**ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸಹಾಯಕ ಸರಕಾರಿ ಅಭಿಯೋಜಕರಿಂದಃ**

ದಿನಾಂಕಃ 07-01-2020 ರಿಂದ 202 ರವರೆಗೆ ಅಬಕಾರಿ ಪೇದೆಯಾಗಿ ಚಿಂಚೋಳಿಯಲ್ಲಿ ಕಾರ್ಯನಿರ್ವಹಿಸಿದ್ದೇನೆ.

ದಿನಾಂಕಃ 15-04-2024 ರಂದು ನಾನು, ಚಾಸಾ-1 ಮತ್ತು 5ರವರು ಸುಲೇಪೇಟ ಗ್ರಾಮದ ಹತ್ತಿರ ಗಸ್ತು ಕರ್ತವ್ಯದಲ್ಲಿದ್ದಾಗ ಮಧ್ಯಾಹ್ನ 12.15ಕ್ಕೆ ದ್ವಿಚಕ್ರ ವಾಹನ ಸಂಖ್ಯೆ KA 38 Y 5588 ಬರುತ್ತಿದ್ದನ್ನು ನೋಡಿ ಚಾಸಾ-1ರವರು ಅದನ್ನು ನಿಲ್ಲಿಸಿ ವಿಚಾರಿಸಲಾಗಿ ಅದರಲ್ಲಿ ಓರಿಜಿನಲ್ ಚೌಸ್ 90 mlನ 30 ಟೆಟ್ರಾ ಪ್ಯಾಕೇಟಗಳು ಮತ್ತು 650 mlನ KFC ಬೀಯರ ಬಾಟಲಗಳು ಸಿಕ್ಕಿದ್ದವು. ಚಾಸಾ-1ರವರು ಚಾಸಾ-2 ಮತ್ತು 3ರವರನ್ನು ಕರೆಸಿ ಮುದ್ದೇ ಮಾಲುಗಳನ್ನು ರಸಾಯನಿಕ ಪರೀಕ್ಷೆಗಾಗಿ ಪಂಚರ ಸಮಕ್ಷಮ ಜಪ್ತಿ ಪಡಿಸಿ ಸೀಲ್ ಮಾಡಲಾಯಿತು. ಮಧ್ಯಾಹ್ನ 12.15 ರಿಂದ 1.15ರವರೆಗೆ ಜಪ್ತಿ ಪಂಚನಾಮೆ ಮಾಡಲಾಯಿತು. ಈಗ ನ್ಯಾಯಾಲಯದ ಮುಂದೆ ಇರುವ ಆರೋಪಿತರನ್ನು ಸಾಕ್ಷಿದಾರರು ನೋಡಿ ಗುರುತಿಸಿರುತ್ತಾರೆ. ನ್ಯಾಯಾಲಯದ ಮುಂದೆ ಇರುವ ಮುದ್ದೇ ಮಾಲುಗಳನ್ನು ಸಾಕ್ಷಿದಾರರು ನೋಡಿ ಗುರುತಿಸಿದ್ದು ಅವುಗಳನ್ನು ಮು.ಮಾ-1 ಎಂದು ಗುರುತಿಸಲಾಯಿತು.

(ಈ ಹಂತದಲ್ಲಿ ತನಿಖಾಧಿಕಾರಿಯವರ ಮುಂದೆ ಸಲ್ಲಿಸಿರುವ ಈ ಸಾಕ್ಷಿ ಭಾಗಶಃ ಪ್ರತಿಕೂಲ ಸಾಕ್ಷ್ಯ ನುಡಿಯುತ್ತಿದ್ದು, ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ಕೊಡುವಂತೆ ಸ.ಸ.ಅ.ರವರು ಅನುಮತಿ ಕೋರುತ್ತಾರೆ. ಸಾಕ್ಷಿಯ ಹೇಳಿಕೆಯನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು.)

**ಪಾಟೀ ಸವಾಲುಃ ಸಹಾಯಕ ಸರಕಾರಿ ಅಭಿಯೋಜಕರಿಂದಃ**

ದ್ವಿಚಕ್ರ ವಾಹನವನ್ನು ತಡೆದು ನಿಲ್ಲಿಸಿ ಅವರ ಹೆಸರನ್ನು ವಿಚಾರಿಸಲಾಗಿ ಒಬ್ಬರ ಹೆಸರು ರಾಘವೇಂದ್ರ ಮತ್ತೊಬ್ಬರ ಹೆಸರು ಡೇವಿಡ್ ಎಂದು ತಿಳಿಸಿದ್ದರು ಎಂದರೆ ಸರಿ. ಅವರು ಅಕ್ರಮ ಮಾರಾಟ ಮಾಡುವ ಉದ್ದೇಶದಿಂದ ಸಾಗಾಟ ಮಾಡುತ್ತಿದ್ದರು ಅಂತ ಖಚಿತ ಪಡಿಸಿಕೊಂಡಿದ್ದರು ಎಂದರೆ ಸರಿ.

**<u>ಪಾಟೀ ಸವಾಲು ಆರೋಪಿತರ ಪರ ಶ್ರೀ SNB ವಕೀಲರಿಂದ:</u>**

ಸುಲೇಪೇಟದ ಬಸ್ ನಿಲ್ದಾಣದ 300 ಮೀಟರ ಒಳಗಡೆ ಆರೋಪಿತರನ್ನು ಘಟನಾ ದಿನ ಹಿಡಿದಿದ್ದೇವು. ಚಾಸಾ-1ರವರು ಚಾಸಾ-2 ಮತ್ತು 3ರವರನ್ನು ಕರೆ ಮಾಡಿ ಕರೆಸಿದ್ದರು. ಚಾಸಾ-2 ಮತ್ತು 3ರವರು ಬರಲು ಸುಮಾರು 15 ನಿಮಿಷ ಬೇಕಾಯಿತು. ಚಾಸಾ-2 ಮತ್ತು 3ರವರು ಅವರ ವಾಹನದಲ್ಲಿ ಬಂದಿದ್ದಾರೆ. ಎಲ್ಲಾ ಮುದ್ದೆ ಮಾಲುಗಳನ್ನು ಬಿಳಿ ಚೀಲದಲ್ಲಿ ಜಪ್ತಿ ಪಡಿಸಿಕೊಳ್ಳಲಾಯಿತು. ಮುದ್ದೆ ಮಾಲುಗಳು ಸಿಕ್ಕಿದ್ದು ಒಂದು ಗೋಣಿ ಚೀಲದಲ್ಲಿ ಅದನ್ನು ಕೂಡ ಜಪ್ತಿ ಪಡಿಸಿದ್ದೇವೆ. ಮು.ಮಾ ಮೇಲೆ ಇರುವ ತಯಾರಿಕ ದಿನಾಂಕ ಮತ್ತು ಬ್ಯಾಚ್ ನಂಬರನ್ನು ನಾನು ನೋಡಿದ್ದೇನೆ. ಪಂಚನಾಮೆಯಲ್ಲಿ ತಯಾರಿಕಾ ದಿನಾಂಕ ಟೀನ್ ನಂಬರ ಮತ್ತು ಬ್ಯಾಚ್ ನಂಬರನ್ನು ನಮೂದು ಮಾಡಲಾಗಿದೆ. ನಾವು ಜಪ್ತಿ ಪಡಿಸಿದಾಗ ಮು.ಮಾ ಮೇಲೆ ಟೀನ್ ನಂಬರ, ಬ್ಯಾಚ್ ನಂಬರ ಮತ್ತು ತಯಾರಿಕಾ ದಿನಾಂಕಗಳು ಹಾಗೇ ಇದ್ದವು. ಈಗ ನ್ಯಾಯಾಲಯದ ಮುಂದೆ ಇರುವ ಬೀಯರ ಬಾಟಲಗಳ ಮೇಲೆ ಬ್ಯಾಚ್ ನಂಬರ ಮತ್ತು ತಯಾರಿಕಾ ದಿನಾಂಕ ಇಲ್ಲ ಎಂದರೆ ಸರಿ. ನಾನು ಹೇಳಿದ ಹಾಗೇ ಬ್ಯಾಚ್ ನಂಬರ ಇತ್ತು ಆದರೆ ನ್ಯಾಯಾಲಯದ ಮುಂದೆ ಇರುವ ಬಾಟಲಗಳ ಮೇಲೆ ಬ್ಯಾಚ ನಂಬರ ಮತ್ತು ತಯಾರಿಕಾ ದಿನಾಂಕವನ್ನು ಹರಿದಿದ್ದು ಇವೆರಡರಲ್ಲಿ ಯಾವುದು ಸರಿ ಎಂದರೆ ಸಾಕ್ಷಿದಾರರು ನಾನು ಹೇಳಿದ್ದು ಸರಿ ಎಂದು ನುಡಿಯುತ್ತಾರೆ. ಆರೋಪಿಗೂ ಮುದ್ದೆ ಮಾಲಿಗೂ ಯಾವುದೇ ಸಂಬಂಧವಿಲ್ಲ ಎಂದರೆ ಸರಿಯಲ್ಲ. ನಮ್ಮ ಠಾಣೆಯಲ್ಲಿ ಕುಳಿತು ಆರೋಪಿತರ ವಿರುದ್ದ ಸುಳ್ಳು ದಾಖಲೆಗಳನ್ನು ಸೃಷ್ಟಿ ಮಾಡಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮುಖ್ಯ ವಿಚಾರಣೆಃ ಇಲ್ಲ**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**
**ಓ.ಹೇ.ಕೇ. ಸರಿ ಇದೆ.**

**ಪ್ರಧಾನ ಪ್ರ.ದ.ನ್ಯಾ.ದಂ. ಚಿಂಚೋಳಿ**